21	HASSAN	23225	391926	415151
22	KODAGU	10177	90915	101092
23	KOLAR	29932	285917	315849
24	MANDYA	34633	412867	447500
25	MYSORE	50501	550369	600870
26	SHIMOGA	38146	287949	326095
27	TUMKUR	49441	523722	573163
28	UDUPI	18751	131689	150440
29	CHIKKABALLAPURA	28649	252896	281545
30	RAMANAGARA	18826	266395	285221
31	BANGALORE IRA	14890	289393	304283
	TOTAL	**1098525**	**9241757**	**10340282**

ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಆಧಾರದ ನೌಕರರು

206(316); ಶ್ರೀ ಮುನಿರಾಜು ಎಸ್. (ದಾಸರಹಳ್ಳಿ)

ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಹಾಗಾದರೆ, ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪ್ರತಿಯೊಂದು ನೌಕರರಿಗೆ ಪ್ರತಿ ತಿಂಗಳಿಗೆ ಎಷ್ಟು ವೇತನವನ್ನು ನೀಡಲಾಗುತ್ತಿದೆ;

ಇ) ಸದರಿ ನೌಕರರಿಗೆ ಪ್ರತಿ ತಿಂಗಳ ವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಗುತ್ತಿಗೆ ಆಧಾರದ ನೌಕರರಿಗೆ ಪ್ರತಿ ತಿಂಗಳು ಸಕಾಲದಲ್ಲಿ ವೇತನ ದೊರೆಯುವಂತಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಯುಷ್ ಸರ್ಕಾರಿ ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳ ಆಯುಷ್ ವಿಭಾಗಗಳು ಸೇರಿ ಒಟ್ಟು 5633 ನೌಕರರು ಗುತ್ತಿಗೆ ಆಧಾರದ ಮೇಲೆ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೌಕರರಿಗೆ ಪಾವತಿಸುತ್ತಿರುವ ವೇತನ ವಿವರ:–

ಕ್ರ.ಸಂ	ಹುದ್ದೆಯ ಹೆಸರು	ಒಟ್ಟು ಹುದ್ದೆಗಳು	ಪಾವತಿಸುತ್ತಿರುವ ವೇತನ	
			ಹೆಚ್ಚು ಆದ್ಯತೆಯ ಜಿಲ್ಲೆಗಳು	ಇತರೆ ಜಿಲ್ಲೆಗಳು
1	ತಜ್ಞ ವೈದ್ಯರುಗಳು	60	` 80000	` 60000
2	ಎಂ.ಬಿ.ಬಿ.ಎಸ್. ವೈದ್ಯರು	69	` 35000	` 30000
3	ಆಯುಷ್ ವೈದ್ಯರು	604	` 14000	` 14000
4	ಶುಶ್ರೂಷಕರು	3965	` 10000	` 8000
5	ಕಿ.ಮ.ಆ. ಸಹಾಯಕಿಯರು	774	` 7500	` 7500
6	ಪ್ರಯೋಗ ಶಾಲೆ ತಂತ್ರಜ್ಞರು	138	` 7000	` 7000

ಆಯುಷ್ ಇಲಾಖೆಯಲ್ಲಿ ಹಾಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ವೈದ್ಯರುಗಳಿಗೆ ಪ್ರತಿ ತಿಂಗಳಿಗೆ ` 26,000/– ಗಳಂತೆ ಸಂಚಿತ ವೇತನವನ್ನು ನೀಡಲಾಗುತ್ತಿದೆ.

ಇ) ಸಾಮಾನ್ಯವಾಗಿ ಪ್ರತಿ ತಿಂಗಳು ವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವುದಿಲ್ಲ. ಆದರೆ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಮಾತ್ರ ವೇತನ ಪಾವತಿಯಲ್ಲಿ ಗುತ್ತಿಗೆ ನವೀಕರಣ ಪ್ರಕ್ರಿಯೆಯಿಂದಾಗಿ ಅಲ್ಪ ಪ್ರಮಾಣದ ವಿಳಂಭವಾಗುತ್ತದೆ.

ಈ) ಹೌದು. ಪ್ರತಿ ತಿಂಗಳ 5ನೇ ತಾರೀಕಿನೊಳಗೆ ವೇತನ ಪಾವತಿಯಾಗುವಂತೆ ಕ್ರಮ ಕೈಗೊಳ್ಳಲಾಗಿದೆ.

ಹಿಂದುಳಿದ ವರ್ಗಗಳ ಹಾಸ್ಟೆಲ್ ಕಟ್ಟಡಗಳು

207(293); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಬಂಗಾರಪೇಟೆ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಎಷ್ಟು ಹಾಸ್ಟೆಲ್‌ಗಳಿವೆ. ಇವುಗಳಲ್ಲಿ ಸ್ವಂತ ಕಟ್ಟಡ ಹಾಗೂ ಬಾಡಿಗೆ ಕಟ್ಟಡಗಳೆಷ್ಟು;

ಆ) ಪ್ರತಿ ಹಾಸ್ಟೆಲ್‌ನಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ತರಗತಿವಾರು / ಜಾತಿವಾರು ವಿವರ ನೀಡುವುದು;

ಇ) ಸ್ವಂತ ಕಟ್ಟಡಗಳಿದ್ದಲ್ಲಿ ದುರಸ್ತಿಗಾಗಿ ಖರ್ಚು ಮಾಡಿದ ಮೊತ್ತ ಎಷ್ಟು;

ಈ) ಬಾಡಿಗೆ ಕಟ್ಟಡಗಳಿದ್ದಲ್ಲಿ ನೀಡಲಾದ ಬಾಡಿಗೆ ಮೊತ್ತ ಎಷ್ಟು;

ಉ) ಸ್ವಂತ ಕಟ್ಟಡಗಳು ಇಲ್ಲದಿರುವ ಕಡೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಬಂಗಾರಪೇಟೆ ಕ್ಷೇತ್ರದಲ್ಲಿ 2 ಮೆಟ್ರಿಕ್ ನಂತರದ ಮತ್ತು 3 ಮೆಟ್ರಿಕ್ ಪೂರ್ವ ಹೀಗೆ ಒಟ್ಟು 5 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ 2 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳಲ್ಲಿ 3 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತವೆ.